ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸಾರ್ವಜನಿಕ ಸುಲಭ ಶೌಚಾಲಯಗಳ ವ್ಯವಸ್ಥೆ ಇಲ್ಲ. ಆದುದರಿಂದ ಪ್ರವಾಸಿಗರು ಹಾಗೂ ಸಾರ್ವಜನಿಕರು ಸದರಿ ಕಟ್ಟಡಗಳ ಮುಂದಿರುವ ಪಾರ್ಕಿಂಗ್‌ಗಳಲ್ಲಿ ಇರುವ ಖಾಲಿ ಜಾಗಗಳಲ್ಲಿ ಮಲಮೂತ್ರ ವಿಸರ್ಜನೆ ಮಾಡುವುದರಿಂದ ಸದರಿ ಕಟ್ಟಡಗಳ ಸುತ್ತಲಿನ ಪರಿಸರ ಹೊಲಸಾಗಿದೆ. ಹಾಗೂ ಉದ್ಯಾನವನಗಳೂ ಹೊಲಸಾಗುತ್ತಿದೆ. ಆದಕಾರಣ ಹೈಕೋರ್ಟ್ ಬಳಿ, ಶಾಸಕರ ಭವನದ ಬಳಿ ಹಾಗೂ ವಿಧಾನಸೌಧದ ಬಳಿ, ಆಧುನಿಕ ವ್ಯವಸ್ಥೆಯುಳ್ಳ, ಸಾಕಷ್ಟು ನೀರಿನ ವ್ಯವಸ್ಥೆಯುಳ್ಳ ಸುಲಭ ಶೌಚಾಲಯಗಳನ್ನು ಕೂಡಲೇ ನಿರ್ಮಿಸಿ ಸಾರ್ವಜನಿಕರಿಗೆ ಹಾಗೂ ಪ್ರವಾಸಿಗರಿಗೆ ಅನುಕೂಲ ಮಾಡಿಕೊಡಬೇಕು. ಅದರಲ್ಲೂ ಹೆಣ್ಣುಮಕ್ಕಳು ಹಾಗೂ ಸ್ತ್ರೀಯರಿಗೆ ಸಾರ್ವಜನಿಕ ಶೌಚಾಲಯವಿಲ್ಲದೆ ಬಹಳ ತೊಂದರೆಯಾಗುತ್ತಿದೆ. ಕೂಡಲೇ ಈ ಬಗ್ಗೆ ಕ್ರಮ ಕೈಗೊಂಡು ಪರಿಸರವನ್ನು ಸ್ವಚ್ಛವಾಗಿಡುವುದಲ್ಲದೆ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರುತ್ತೇನೆ. ಮಾನ್ಯ ಅಧ್ಯಕ್ಷರೇ, ಇದು ತಮಗೂ ಬರುತ್ತದೆ. ಏಕೆಂದರೆ ವಿಧಾನಸೌಧ ಮತ್ತು ಶಾಸಕರ ಭವನ ಈ ಭಾಗದಲ್ಲಿಯೇ ಬರುತ್ತದೆ.

ಅಧ್ಯಕ್ಷರು :—ಹೌದು ವಿಧಾನಸೌಧದಲ್ಲಿ ನನ್ನದೂ ಸ್ವಲ್ಪ ಅಧಿಕಾರ ಇದೆ. I would like the government to take serious note of the suggestion which he has made.

ಶ್ರೀ ಟಿ. ಎನ್. ನರಸಿಂಹಮೂರ್ತಿ :—ಮಾನ್ಯ ಅಧ್ಯಕ್ಷರೇ, ಪ್ರಥಮ ಬಾರಿಗೆ ಮಾನ್ಯ ಪೆರಿಕಲ್ ಎಂ. ಮಲ್ಲಪ್ಪನವರು ವಿದೇಶೀ ಪ್ರವಾಸಿಗರು ಮತ್ತು ನಮ್ಮ ರಾಜ್ಯದ ಇತರ ಕಡೆಗಳಿಂದ ವಿಧಾನಸೌಧ ನೋಡಲಿಕ್ಕೆ ಬರತಕ್ಕಂತಹವರಿಗೆ ಶೌಚಾಲಯಗಳನ್ನು ನೀಡುವ ಮೂಲಕ ಕನಿಷ್ಠ ಸೌಲಭ್ಯಗಳನ್ನು ನೀಡಬೇಕೆಂದು ಪ್ರಸ್ತಾಪ ಮಾಡಿದ್ದಾರೆ, ಮತ್ತು ಅವರ ವಾದಕ್ಕೆ ತಾವೂ ಕೂಡ ಧ್ವನಿಗೂಡಿಸಿದ್ದೀರಿ. ಇದು ಬಹಳ ಉತ್ತಮವಾದ ಸಲಹೆಯಾಗಿದೆ. ಸರ್ಕಾರ ಇದನ್ನು ಎಚ್ಚರಿಕೆಯಿಂದ ಗಮನಿಸಿ, ನಾಗರೀಕರಿಗೆ ಮತ್ತು ಪ್ರವಾಸಿಗರಿಗೆ ಯಾವ ರೀತಿಯ ಸೌಲಭ್ಯ ಕೊಡಬೇಕೆಂಬ ಬಗ್ಗೆ ಚಿಂತನೆ ಮಾಡುತ್ತದೆ.

ಅಧ್ಯಕ್ಷರು.—ಈ ಉತ್ತರವನ್ನು ಯಾರು ಬೇಕಾದರೂ ಹೇಳಬಹುದು ಅಲ್ಲವೇ ? ಇತ್ತೀಚೆಗೆ ಚಿಂತನ ಚಿಲುಮೆಗಳು ಜಾಸ್ತಿ ಆಗಿ.....

ಶ್ರೀ ಸಿ. ಬೈರೇಗೌಡ ;—ಇವರು ಚಿಂತನೆ ಮಾಡುವವರೆಗೂ ಬಂದವರು ಎಲ್ಲಿಗೆ ಹೋಗಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ :—ಪತಕ್ಕಾಗಿ ಚಿಂತನೆ ಎಂಬ ಪದವನ್ನು ಹೇಳಿದೆ ಎಂದರೆ ಯಾವಾಗಲೂ ಪರಿಶೀಲಿಸುತ್ತೇನೆ ಪರಿಶೀಲಿಸುತ್ತೇನೆಂದು ಹೇಳುತ್ತಿದ್ದೆ ಪದ ಬದಲಾವಣೆಯಾಗಲಿ ಎಂದು ಆ ರೀತಿ ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ :—ಚಿಂತನೆ, ಪರಿಶೀಲನೆ, ಕಾಲಾವಕಾಶ, ಈ ಸರಕಾರದ ಒಂದು ಮೂಲಭೂತ ಹಕ್ಕು ಆದಂತೆ ಆಯಿತು.

(ಗೊಂದಲ)

ಶ್ರೀ ಟಿ. ಎನ್. ನರಸಿಂಹಮೂರ್ತಿ:—ನಾನು ಅಷ್ಟು ಲಘುವಾಗಿ ಹೇಳಲಿಲ್ಲ. ಅವರು ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ಸರಕಾರ ಅದನ್ನು ಪರಿಶೀಲಿಸುತ್ತದೆ.

ಗಮನ ಸೆಳೆಯುವ ಸೂಚನೆ

(1) ರಾಷ್ಟ್ರೀಕೃತ ಬ್ಯಾಂಕುಗಳವರು ಬೆಂಗಳೂರು ನೀರು ಸರಬರಾಜು ಮಂಡಳಿಯಂವರ ನೀರಿನ ಬಿಲ್ಲನ್ನು ತೆಗೆದುಕೊಳ್ಳದೇ ಇರುವುದರಿಂದ ಉಂಟಾಗಿರುವ ತೊಂದರೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ.—ಬೆಂಗಳೂರು ನಗರದಲ್ಲಿರುವ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರ ನೀರಿನ ಬಿಲ್ಲು ತೆಗೆದುಕೊಳ್ಳುವುದನ್ನು ನಿಲ್ಲಿಸಿರುವುದರಿಂದ ಉಂಟಾಗಿರುವ ತೊಂದರೆ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ (ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಮಂತ್ರಿಮಂಡಲದ ಪರವಾಗಿ ಈ ಹೇಳಿಕೆಯನ್ನು ನೀಡುತ್ತೇನೆ.

ಇದುವರೆಗೂ, ಬೆಂಗಳೂರು ನಗರದ ನಾಗರೀಕರು ನೀರಿನ ಬಿಲ್ಲುಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸಿಂಡಿಕೇಟ್ ಬ್ಯಾಂಕ್ ಮತ್ತು ಕೆನರಾ ಬ್ಯಾಂಕುಗಳ ನಗರ ಶಾಖೆಗಳಲ್ಲಿ ಪಾವತಿ ಮಾಡುತ್ತಿದ್ದರು.

ಈಗ, ಈ ಬ್ಯಾಂಕ್‌ಗಳು ನೀರಿನ ಬಿಲ್ಲುಗಳ ಹಣ ಸ್ವೀಕಾರವನ್ನು ನಿಲ್ಲಿಸಿವೆ, ಅದರಲ್ಲಿಯೂ ಸಿಂಡಿಕೇಟ್ ಬ್ಯಾಂಕ್ ಮತ್ತು ಕೆನರಾ ಬ್ಯಾಂಕುಗಳು ಸಾರ್ವಜನಿಕರು ಬಿಲ್ಲಿನ ಮೊತ್ತದ ಜೊತೆಗೆ ೧.೦೦ ರೂ. ಹೆಚ್ಚು ನೀಡಬೇಕೆಂದು ಹಾಗೂ ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ತೆರೆಯ ಬೇಕೆಂದು ನಿಬಂಧಿಸಿದ್ದವು. ಹಿಂದಿನ ಪದ್ಧತಿಯಂತೆ ಬ್ಯಾಂಕಿನ ಶಾಖೆಗಳಲ್ಲಿ ಹಣಕಟ್ಟುವ ವ್ಯವಸ್ಥೆಗಾಗಿ ಜಲಮಂಡಲಿಯು ಹಲವಾರು ಪ್ರಯತ್ನಗಳನ್ನು ಮಾಡಿದ್ದು, ಇದನ್ನು ಸಂಬಂಧಿಸಿದ ಬ್ಯಾಂಕ್‌ಗಳು ಒಪ್ಪಿಕೊಂಡಿರಲಿಲ್ಲ. ಆದಾಗ್ಯೂ ಜಲಮಂಡಲಿಯು ತನ್ನ ಎಲ್ಲಾ ೩೨ ಸೇವಾ ಕೇಂದ್ರಗಳಲ್ಲಿ ಮತ್ತು ಉಪವಿಭಾಗಗಳಲ್ಲಿ ಮರ ಪೆಟ್ಟಿಗೆಗಳನ್ನು ಸ್ಥಾಪಿಸಿ, ಇವುಗಳಲ್ಲಿ ಚೆಕ್‌ಗಳನ್ನು ಹಾಕುವ ವ್ಯವಸ್ಥೆಮಾಡಿ ನಾಗರೀಕರ ತೊಂದರೆಗಳನ್ನು ಸ್ವಲ್ಪಮಟ್ಟಿಗೆ ನಿವಾರಿಸಿದೆ.

ಈ ಮಧ್ಯೆ ಜಲಮಂಡಲಿಯು ವೈಶ್ಯ ಬ್ಯಾಂಕ್‌ನೊಂದಿಗೆ ವ್ಯವಹರಿಸುತ್ತಿದ್ದು, ಕೆಲವು ಸೇವಾ ಕೇಂದ್ರಗಳಲ್ಲಿ ಹಣ ವಸೂಲಿ ಮಾಡುವ ವ್ಯವಸ್ಥೆಯನ್ನೊದಗಿಸುವ ಮೂಲಕ ನಾಗರೀಕರ ತೊಂದರೆಗಳನ್ನು ಬಹುಮಟ್ಟಿಗೆ ತೊಡೆದು ಹಾಕುತ್ತಿದೆ.

ತಾ॥ ೨೪-೫-೧೯೯೦ರ ತನ್ನ ಸಭೆಯಲ್ಲಿ ಮಂಡಲಿಯು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಜೊತೆ ವೈಶ್ಯ ಬ್ಯಾಂಕ್ ಲಿ, ಗೂ ಸಹಾ ನೀರಿನ ಬಿಲ್ಲಿನ ಹಣ ಸ್ವೀಕಾರ ಮಾಡುವ ವ್ಯವಸ್ಥೆಗೆ ಒಪ್ಪಿಗೆ ನೀಡಿರುತ್ತದೆ.

ಈ ಸಂಬಂಧದಲ್ಲಿ ವೈಶ್ಯ ಬ್ಯಾಂಕ್‌ಗೆ ಹಣ ಸ್ವೀಕರಿಸುವ ಕೇಂದ್ರಗಳನ್ನು ಸ್ಥಾಪಿಸುವಂತೆ ಸೂಚಿಸಿದ್ದು ಅವರಿಂದ ಇನ್ನೂ ಉತ್ತರ ಬಂದಿರುವುದಿಲ್ಲ.

ಜಲಮಂಡಲಿಯು ಅಪೆಕ್ಸ್ ಬ್ಯಾಂಕ್‌ನೊಂದಿಗೂ ಸಹಾ ವ್ಯವಹರಿಸಿ ನೀರಿನ ಬಿಲ್ಲಿನ ಹಣ ಸ್ವೀಕಾರ ವ್ಯವಸ್ಥೆಯನ್ನು ಮಾಡುವಂತೆ ಕೋರಲಾಗುವುದು.

ತಾತ್ಕಾಲಿಕ ವ್ಯವಸ್ಥೆಯಂತೆ, ಎಲ್ಲೆಲ್ಲಿ, ಜನಸಂದಣಿ ಹೆಚ್ಚಾಗಿರುವುದೋ ಆ ಉಪವಿಭಾಗದ ಬ್ಯಾಂಕಿನ ಕೌಂಟರ್ ಜೊತೆ ಮತ್ತೊಂದು ಹಣ ಸಂಗ್ರಹಣಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಜೊತೆಗೆ, ಸಾಧ್ಯವಾದ ಎಲ್ಲಾ ಕ್ರಮಗಳನ್ನು ಕೈಕೊಂಡು ಈ ದಿಸೆಯಲ್ಲಿ ಸಾರ್ವಜನಿಕರಿಗಾಗಿರುವ ತೊಂದರೆಗಳನ್ನು ಕಡಿಮೆ ಮಾಡಲಾಗುವುದು.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ ಕಳೆದ ೩ ದಿವಸದಿಂದ ನ್ಯಾಷನಲೈಸ್ಡ್ ಬ್ಯಾಂಕ್‌ಗಳಲ್ಲಿ ನೀರಿನ ಬಿಲ್ಲನ್ನು ತೆಗೆದುಕೊಳ್ಳುತ್ತಿಲ್ಲ. ಇದರಿಂದಾಗಿ ಬೆಂಗಳೂರು ವಾಟರ್ ಸಪ್ಲೈ ಕೌಂಟರ್‌ಗಳಲ್ಲಿ ಸುಮಾರು ೩-೪ ಗಂಟೆಕಾಲ ಜನರು ಕ್ಯೂನಲ್ಲಿ ನಿಂತುಕೊಳ್ಳಬೇಕಾಗಿದೆ. ಇನ್ನೊಂದು ವಿಚಾರ ಎಂದರೆ ಚೆಕ್ಕುಗಳನ್ನು ಕೊಟ್ಟರೆ ಅದಕ್ಕೆ ರಸೀತಿಯನ್ನು ಕೊಡುವುದಿಲ್ಲ. ಅಲ್ಲಿ ಒಂದು ಪೆಟ್ಟಿಗೆಯನ್ನು ಇಟ್ಟಿದ್ದಾರೆ. ಅದರಲ್ಲಿ ಈ ಚೆಕ್ಕನ್ನು ಹಾಕಬೇಕು. ೪-೫ ದಿನಗಳ ನಂತರ ಹೋಗಿ ಕೇಳಿದರೆ ನಮಗೆ ಇನ್ನೂ ಬ್ಯಾಂಕ್‌ನಿಂದ ಇಂಟಿಮೇಷನ್ ಬಂದಿಲ್ಲ ಇನ್ನೂ ಒಂದೆರಡು ದಿವಸ ಬಿಟ್ಟು ಬನ್ನಿ ಎಂದು ಹೇಳುತ್ತಾರೆ. ಆಗಲೂ ಒಂದಲ್ಲೊಂದು ಜವಾಬು ಹೇಳುತ್ತಾರೆ. ಹೀಗೆ ಚೆಕ್ಕನ್ನು ಕೊಟ್ಟರೂ ಕೂಡ ೪-೫ ಸಾರಿ ಕೌಂಟರ್‌ಗಳಿಗೆ ಹೋಗಿ ಸುತ್ತಾಡಬೇಕು. ಇದರಿಂದ ಬಹಳ ಜನರಿಗೆ ತೊಂದರೆಯಾಗುತ್ತಿದೆ. ಮೊದಲಂ ನ್ಯಾಷನಲೈಜ್ಡ್ ಬ್ಯಾಂಕ್‌ಗಳಲ್ಲಿ ತೆಗೆದುಕೊಳ್ಳುವಾಗ ಜನರಿಗೆ ಬಹಳ ಅನುಕೂಲವಾಗುತ್ತಿತ್ತು. ಆದರೆ ಅಷ್ಟೇ ಕಷ್ಟ ಈಗ ಆಗುತ್ತಿದೆ.

ಇನ್ನೊಂದು ವಿಚಾರ ಎಂದರೆ ಈ ಬೆಂಗಳೂರು ನಗರದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಶಾಖೆಗಳು ಬಹಳಷ್ಟು ಇವೆ. ಜಯನಗರ ಮಲ್ಲೇಶ್ವರಂ ಮುಂತಾದ ಕಡೆಗಳಲ್ಲಿ ಬೆಂಗಳೂರು ವಾಟರ್ ಸಪ್ಲೈನವರೇ ತಮ್ಮ ಸ್ವಂತ ಕಟ್ಟಡದಲ್ಲಿ ಈ ಮೈಸೂರು ಬ್ಯಾಂಕಿನ ಶಾಖೆಗಳಿಗೆ ಜಾಗವನ್ನು ಕೊಟ್ಟಿದ್ದಾರೆ. ಇವರು ಎಕ್ಸ್‌ಟೆನ್‌ಷನ್ ಕೌಂಟರ್‌ಗಳನ್ನು ತೆರೆದಿರುವುದರಿಂದ ಅಲ್ಲಿ ಹಣ ಕಟ್ಟಲು ಹೋದರೆ ಏತಕ್ಕೆ ರೆಫ್ಯೂಸ್ ಮಾಡುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಬೆಂಗಳೂರು ವಾಟರ್ ಸಪ್ಲೈ ಕೂಡ ರಾಜ್ಯ ಸರ್ಕಾರದ ಒಂದು ವಿಭಾಗ. ಅದೇ ರೀತಿ ಕರ್ನಾಟಕ ಅಪೆಕ್ಸ್ ಬ್ಯಾಂಕ್ ಕೂಡ ರಾಜ್ಯ ಸರ್ಕಾರದ ಒಂದು ಸಂಸ್ಥೆ. ಆದ್ದರಿಂದ ಅವರಿಗೆ ಇವರು ಒಂದು ಡೈರೆಕ್ಷನನ್ನು ಕೊಡಬೇಕು. ಬೆಂಗಳೂರಿನಲ್ಲಿ ಎಲ್ಲ ಕಡೆಗಳಲ್ಲೂ ಅಪೆಕ್ಸ್ ಬ್ಯಾಂಕ್‌ನ ಶಾಖೆಗಳಿರುವುದರಿಂದ ಅವರು ನೀರಿನ ಬಿಲ್ಲನ್ನು ಕಟ್ಟಿಸಿಕೊಂಡರೆ ನಾಗರೀಕರಿಗೆ ಬಹಳ ಅನುಕೂಲವಾಗುತ್ತದೆ.

ಇನ್ನೊಂದು ವಿಚಾರ ಎಂದರೆ, ನಾವು ಚೆಕ್ಕನ್ನು ಕೊಟ್ಟರೆ ಕೂಡಲೇ ರಸೀತಿಯನ್ನು ಕೊಡಬೇಕು ಜನರು ದುಡ್ಡು ಕೊಡುತ್ತೇವೆಂದರೂ ಸಹ ಬಿ. ಡಬ್ಲ್ಯೂ.ಎಸ್.ಬಿ ಯವರು ರಸೀದಿಯನ್ನು ಕೊಡುವುದಕ್ಕೆ ನಮ್ಮಲ್ಲಿ ಸ್ಟಾಫ್ ಇಲ್ಲ ಎಂದು ಹೇಳುವುದನ್ನು ನೋಡಿದರೆ ಒಂದು ರೀತಿಯ ನಾಚಿಕೆಗೇಡಿನ ವಿಷಯವೆಂದು ಹೇಳಬೇಕಾಗುತ್ತದೆ. ನಮ್ಮಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹಣ ಇಲ್ಲವೆಂದು ಹೇಳುತ್ತೀರಿ. ಜನರು ದುಡ್ಡನ್ನು ಕೊಡುವುದಕ್ಕೆ ಮುಂದೆ ಬಂದರೂ ಅದನ್ನು ತೆಗೆದುಕೊಂಡು ಅವರಿಗೆ ಕೊಡಬೇಕಾದ ರಸೀದಿಯನ್ನು ಕೊಡಿ ಎಂದರೆ ನಮ್ಮ ಆ ವ್ಯವಸ್ಥೆ ಇಲ್ಲ. ಇದಕ್ಕೇನು ಮಾಡಬೇಕು ? ಆದ್ದರಿಂದ ದಯವಿಟ್ಟು ಅದಷ್ಟು ಹೆಚ್ಚಿನ ಕೌಂಟರ್‌ಗಳನ್ನು ಓಪನ್ ಮಾಡಿ ನಾಗರೀಕರಿಗೆ ಅನುಕೂಲ ಮಾಡಿಕೊಡುತ್ತೀರಾ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಸಭಾಧ್ಯಕ್ಷರೆ, ಈ ಬೆಂಗಳೂರು ನಗರದಲ್ಲಿ ನೀರಿನ ಬಿಲ್ಲನ್ನು ಕಟ್ಟಬೇಕಾದರೆ ಚೆಕ್ ಕೊಟ್ಟರೆ ರಸೀದಿ ಕೊಡುವುದಿಲ್ಲ, ನಾಷನಲೈಸ್ಡ್ ಬ್ಯಾಂಕ್‌ನವರು ದುಡ್ಡನ್ನು ತೆಗೆದುಕೊಳ್ಳುವುದಕ್ಕೆ ರೆಫ್ಯೂಸ್ ಮಾಡುತ್ತಿದ್ದಾರೆ, ಬೆಂಗಳೂರು ವಾಟರ್ ಸಪ್ಲೈ ಬೋರ್ಡ್ ಆಫೀಸಿನಲ್ಲಿ ದೊಡ್ಡ ಕ್ಯೂ ನಿಂತು ಹಣವನ್ನು ಕಟ್ಟಬೇಕಾಗುತ್ತಿದೆ. ಈ ರೀತಿ ಕ್ಯೂ ನಿಲ್ಲುವುದನ್ನು ತಪ್ಪಿಸಬೇಕೆಂದು ಮಾನ್ಯ ಸದಸ್ಯರು ಅನೇಕ ಜನ ದೂರುಗಳನ್ನು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ, ನೀರಿನ ಬಿಲ್ಲನ್ನು ಕಟ್ಟುತ್ತೇವೆಂದರೂ ಅದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಿಲ್ಲವೆಂದು ಹೇಳುತ್ತಿದ್ದಾರೆ. ನಿಜಕ್ಕೂ ಇದು ಒಂದು ಗಹನವಾದ ವಿಷಯ. ಈ ದಿಸೆಯಲ್ಲಿ ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ನೀಡಿದ್ದಾರೆ ಹಾಗೂ ಸುಧಾರಣೆಗಳನ್ನು ಮಾಡಬೇಕೆಂದು ಹೇಳಿದ್ದಾರೆ ಅದೆಲ್ಲವನ್ನು ನಾನು ಸ್ವಾಗತಿಸುತ್ತೇನೆ, ನಾಗರೀಕರಿಗೆ ಆಗಿರುವಂಥ ಅನಾನುಕೂಲಗಳನ್ನು ಗಮನಿಸಿ ಅದಕ್ಕೆ ವ್ಯಾಪಕವಾದ ಸುಧಾರಣೆಯನ್ನು ತಂದು ಯಾವುದೇ ರೀತಿಯಲ್ಲೂ ತೊಂದರೆಯಾಗದಂಥ ನಾಗರೀಕರ ಜೊತೆ ಸಹಕರಿಸುವಂತೆ ಸಂಬಂಧಪಟ್ಟವರ ಜೊತೆ ಮತ್ತೊಮ್ಮೆ ಸಮಾಲೋಚನೆ ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ಸಮಾಧಾನವನ್ನು ಹೇಳುತ್ತಿದ್ದೇನೆ. ಇದಕ್ಕಿಂತಲೂ ಇನ್ನೂ ಹೆಚ್ಚಿನ ವಿಷಯಗಳೇನಾದರೂ ಇದ್ದರೆ ಮಾನ್ಯ ಸದಸ್ಯರೂ ನನ್ನ ಜೊತೆ ಚರ್ಚೆ ಮಾಡಿದರೆ ಆ ಬಗ್ಗೆ ಕೂಡ ವ್ಯಾಪಕವಾಗಿ ಸುಧಾರಿಸಲು ನಾನು ಪ್ರಯತ್ನ ಮಾಡುತ್ತೇನೆ.

(ಮಾನ್ಯ ಜಿ. ಎಸ್. ಆಚಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ವಿತ್ತೀಯ ಕಾರ್ಯಕಲಾಪಗಳು

1990-91ನೇ ಸಾಲಿನ ಬೇಡಿಕೆಗಳ ಮೇಲಿನ ಸಾಮಾನ್ಯ ಚರ್ಚೆ

ಕಂದಾಯ ಮತ್ತು ಕಾರ್ಮಿಕ ಇಲಾಖೆ ಬೇಡಿಕೆಗಳು

ಬೇಡಿಕೆ ಕ್ರ. ಸಂ. 50,51,52,53 ಮತ್ತು 59.

† ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ):— ಮಾನ್ಯ ಅಧ್ಯಕ್ಷರೆ, ಇವತ್ತು ನಾನು ಕೇವಲ ಕಾರ್ಮಿಕ ಇಲಾಖೆಯ ಬೇಡಿಕೆಯ ಬಗ್ಗೆ ಮಾತ್ರ ಕೆಲವು ಸಲಹೆಗಳನ್ನು ಈ ಸದನದ ಮುಂದಿಡುತ್ತೇನೆ. ನಮ್ಮ ನಾಯಕರಾದಂಥ ಮಾನ್ಯ ಚುದ್ರೇಗೌಡರು ಕಂದಾಯ ಇಲಾಖೆಯ ಬಗ್ಗೆ ಇವೊತ್ತು ಮಾತನಾಡುತ್ತಾರೆ ನಿನ್ನೆಯ ದಿವಸ ನಾನು ಮಾತನಾಡುವಾಗ ಐ.ಟಿ.ಐ. ಬಗ್ಗೆ ಮಾತನಾಡುವುದನ್ನು ಮರೆತಿದ್ದೆ. ಕೇಂದ್ರ ಸರ್ಕಾರದ ಸಂಬಂಧಪಟ್ಟ ಮಂತ್ರಿಗಳೂ ಕೂಡ ಒಂದು ವಿಚಾರವನ್ನು ರಾಜ್ಯಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕರ್ನಾಟಕದಲ್ಲಿ ಖಾಸಗಿ ಕ್ಷೇತ್ರದಲ್ಲಿರತಕ್ಕ ಐ.ಟಿ.ಐ ಗಳು ಏನಿವೆ, ಅಲ್ಲಿ ಕೆಲಸಮಾಡತಕ್ಕಂಥ ಸಿಬ್ಬಂದಿವರ್ಗದವರಿಗೆ ಅನುದಾನವನ್ನು ಕೋರಿ ಕರ್ನಾಟಕ ರಾಜ್ಯ ಸರ್ಕಾರ ನಮಗೆ ಯಾವುದೇ ರೀತಿಯ ಪತ್ರವನ್ನೂ ಬರೆದಿಲ್ಲ ಕೇಂದ್ರದಿಂದ ಅನುದಾನವನ್ನು ಪಡೆಯತಕ್ಕ ಪದ್ಧತಿ ಇದೆ. ಈ ಬಗೆ ಅಲ್ಲಿ ಕೆಲಸ ಮಾಡತಕ್ಕ ನೌಕರರು ಮಾನ್ಯ ಮಂತ್ರಿಗಳಿಗೂ ಒಂದು ಮನವಿಯನ್ನು ಕೊಟ್ಟಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅದೇ ಮನವಿಯನ್ನು ನಾನು ಮಾನ್ಯ ಮಂತ್ರಿಗಳಿಗೂ ಕೊಡುತ್ತಿದ್ದೇನೆ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿರತಕ್ಕ ನೌಕರವರ್ಗದವರಿಗೆ ಕೇಂದ್ರ ಸರ್ಕಾರದ ನೆರವನ್ನು ಪಡೆಯಲಿಕ್ಕೆ ತಾವು ಪ್ರಯತ್ನ ಮಾಡಬೇಕೆಂದು ಒಂದು ಸಲಹೆಯನ್ನೂ ಕೂಡ ನಾನು ತಮಗೆ ಕೊಡಲಿಕ್ಕೆ ಇಚ್ಛಿಪಡುತ್ತೇನೆ. ತಾವು ಈ ಸಂದರ್ಭದಲ್ಲಿ ಅಧ್ಯಕ್ಷ ಸ್ಥಾನದಲ್ಲಿ ಕುಳಿತಿರುವುದು ನನಗೆ ಬಹಳ ಸಹಾಯವಾಗಿದೆ. ಏಕೆಂದರೆ ನಿಮ್ಮ ಜಿಲ್ಲೆಯಲ್ಲಿ ಜ್ವಲಂತವಾಗಿ ಹುಟ್ಟಿರತಕ್ಕ ಸಮಸ್ಯೆ ಬಗ್ಗೆ ಹೇಳಬಯಸುತ್ತೇನೆ